# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನ ಬೇವಿನಹಳ್ಳಿ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಕುಡಿಯುವ ನೀರಿಗಾಗಿ ಕೆ.ಆರ್.ಪೇಟೆ ತಾಲ್ಲೂಕಿಗೆ ಸೇರಿದ 11 ಕೆರೆಗಳನ್ನು ತುಂಬಿಸುವ ಕಾಮಗಾರಿಯ (ರಂಗೇನಹಳ್ಳಿ ಕುಡಿಯುವ ನೀರಿನ ಯೋಜನೆ-ಹಂತ 2) ರೂ.22.50 ಕೋಟಿ ಮೊತ್ತದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

*****

**ಓದಲಾಗಿದೆ :**

1) ಸರ್ಕಾರದ ಆದೇಶ ಸಂಖ್ಯೆ:ಜಸಂಇ 91 ಎನ್‌ಹೆಚ್‌ಪಿ 2016, ದಿನಾಂಕ:20-02-2017
2) ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಕಛೇರಿ ಟಿಪ್ಪಣಿ ಸಂಖ್ಯೆ:ಕಾನೀನಿ/ತಾಂತ್ರಿಕ-4/HRBHLC-969-ರಂಗೇನಹಳ್ಳಿ-ಹಂತ-II/2020-21/1707, ದಿನಾಂಕ:17-11-2020.

**ಪ್ರಸ್ತಾವನೆ :**

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕಿನ ರಂಗೇನಹಳ್ಳಿ ಮತ್ತು ಇತರೆ 22 ಕೆರೆಗಳಿಗೆ ಕುಡಿಯುವ ನೀರಿಗಾಗಿ ಹೇಮಾವತಿ ನದಿಯಿಂದ ಕೆ.ಆರ್.ಪೇಟೆ ತಾಲ್ಲೂಕಿನ ಬೇವಿನಹಳ್ಳಿ ಗ್ರಾಮದ ಹತ್ತಿರ ನೀರನ್ನು ಎತ್ತಿ ನೀರು ತುಂಬಿಸುವ ರೂ.4,650.00 ಲಕ್ಷಗಳ ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು (ರಂಗೇನಹಳ್ಳಿ ಕುಡಿಯುವ ನೀರಿನ ಯೋಜನೆ-ಹಂತ 1). ಸದರಿ ಯೋಜನೆಯಡಿಯಲ್ಲಿ ಅರಕಲಗೂಡು ವಿಧಾನಸಭಾ ಕ್ಷೇತ್ರದ 22 ಕೆರೆಗಳಿಗೆ ಮಾತ್ರ ನೀರನ್ನು ತುಂಬಿಸಲು ಯೋಜಿಸಲಾಗಿದ್ದು, ಕೆ.ಆರ್.ಪೇಟೆ ತಾಲ್ಲೂಕಿನ ಕೆರೆಗಳು ಒಳಗೊಂಡಿರುವುದಿಲ್ಲ.

2. ಮೇಲೆ ಓದಲಾದ (2) ಪತ್ರದಲ್ಲಿ, ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಬೇವಿನಹಳ್ಳಿ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಕುಡಿಯುವ ನೀರಿಗಾಗಿ ಕೆ.ಆರ್.ಪೇಟೆ ತಾಲ್ಲೂಕಿನ 11 ಕೆರೆಗಳನ್ನು ತುಂಬಿಸುವ ಕಾಮಗಾರಿಯ (ರಂಗೇನಹಳ್ಳಿ ಕುಡಿಯುವ ನೀರಿನ ಯೋಜನೆ-ಹಂತ 2) ರೂ.22.50 ಕೋಟಿ ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ಕೋರಿರುತ್ತಾರೆ.

3. ಸದರಿ ಯೋಜನೆಯಿಂದ ಕೆ.ಆರ್.ಪೇಟೆ ತಾಲ್ಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಮಳೆಯಾಶ್ರಿತ ಹಾಗೂ ಬರದು ಪ್ರದೇಶದಲ್ಲಿನ ಕೆಳಕಂಡ 11 ಕೆರೆಗಳಿಗೆ 30% ನಂತೆ ಮಳೆ ನೀರಿನ ಲಭ್ಯತೆ ಪರಿಗಣಿಸಿ, ಉಳಿದ 70% ನೀರನ್ನು ತುಂಬಿಸಲು ಉದ್ದೇಶಿಸಲಾಗಿದೆ:-

| ಕ್ರ. ಸಂ. | ಕೆರೆ ಹೆಸರು | ಸಂಗ್ರಹಣಾ ಸಾಮರ್ಥ್ಯ (ಎಂ.ಸಿ.ಎಫ್.ಟಿ.) | ಕ್ರ. ಸಂ. | ಕೆರೆ ಹೆಸರು | ಸಂಗ್ರಹಣಾ ಸಾಮರ್ಥ್ಯ (ಎಂ.ಸಿ.ಎಫ್.ಟಿ.) |
|---|---|---|---|---|---|
| 1 | ಗದ್ದೆಹೊಸೂರ ಕೆರೆ | 8.22 | 7 | ಹಂಗರ ಮುದ್ದನಹಳ್ಳಿ ಕೆರೆ | 2.76 |
| 2 | ಹೊನ್ನೇನಹಳ್ಳಿ ಕೆರೆ | 14.80 | 8 | ಬೀಕನಹಳ್ಳಿ ಕೆರೆ | 9.30 |
| 3 | ಮುದ್ದನಹಳ್ಳಿ ಕೆರೆ | 10.96 | 9 | ಅರೇನಹಳ್ಳಿ ಕೆರೆ | 3.22 |
| 4 | ಕ್ಯಾಥನಹಳ್ಳಿ ಕೆರೆ | 9.18 | 10 | ಗುಬ್ಬಳ್ಳಿ ಕೆರೆ | 3.51 |
| 5 | ಚೌಡಸಮುದ್ರ ಕೆರೆ | 8.33 | 11 | ಸಾಕ್ಷಿಬೀಡು ಕೆರೆ | 10.28 |
| 6 | ಬೀರುವಳ್ಳಿ ಕೆರೆ | 6.84 | | ಒಟ್ಟು: | **87.40** |

...2

4. ಹೇಮಾವತಿ ಯೋಜನೆಯ ಬಲ ಮೇಲ್ದಂಡೆ ನಾಲೆ ಅಡಿಯಲ್ಲಿ 56,000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದ್ದು; ಈ ನಾಲೆ ಅಡಿಯಲ್ಲಿ 52,362 ಎಕರೆ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿರುತ್ತದೆ; ಬಾಕಿ 3,638 ಎಕರೆ ಪ್ರದೇಶ ಕಡಿತವಾಗಿದ್ದು, ಇದರಿಂದಾಗಿ 220 ಎಂ.ಸಿ.ಎಫ್.ಟಿ (0.22 ಟಿ.ಎಂ.ಸಿ.) ನೀರಿನ ಉಳಿತಾಯವಾಗುತ್ತದೆ. ಈ ಉಳಿತಾಯದ ನೀರಿನಲ್ಲಿ ಹಂತ-1 ರ ಯೋಜನೆಗೆ ಬೇಕಾದ 133.00 ಎಂ.ಸಿ.ಎಫ್.ಟಿ. (0.133 ಟಿ.ಎಂ.ಸಿ.) ಹಾಗೂ ಹಂತ-2 ರ ಯೋಜನೆಗೆ 70.00 ಎಂ.ಸಿ.ಎಫ್.ಟಿ. (0.07 ಟಿ.ಎಂ.ಸಿ.) ಸೇರಿ ಒಟ್ಟಾರೆ 203 ಎಂ.ಸಿ.ಎಫ್.ಟಿ. (0.203 ಟಿ.ಎಂ.ಸಿ.) ನೀರನ್ನು ಎತ್ತಲು ಯೋಜಿಸಲಾಗಿದೆಯೆಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರು ವರದಿ ಮಾಡಿರುತ್ತಾರೆ.

5. ಸದರಿ ಪ್ರಸ್ತಾವನೆಯ ಅಂದಾಜು ಪಟ್ಟಿಗೆ ದಿನಾಂಕ:07-01-2020 ರಂದು ಜರುಗಿದ ಕಾವೇರಿ ನೀರಾವರಿ ನಿಗಮದ 6ನೇ ಅಂದಾಜು ಸಮಿತಿಯು ತೀರುವಳಿ ನೀಡಿದ್ದು, ದಿನಾಂಕ:05-10-2020 ರಂದು ನಡೆದ 72ನೇ ಮಂಡಳಿಯ ಸಭೆಯಲ್ಲಿ ಅನುಮೋದನೆ ದೊರೆತಿರುವುದಾಗಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರು ವರದಿ ಮಾಡಿರುತ್ತಾರೆ.

6. ಯೋಜನಾ ಇಲಾಖೆಯಿಂದ ಅನುಮೋದಿತವಾದ 2020-21ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಗೆ ರೂ.1267.10 ಲಕ್ಷಗಳ ಅನುದಾನ ಒದಗಿಸಲಾಗಿದೆ.

7. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ:

**ಸರ್ಕಾರಿ ಆದೇಶ ಸಂಖ್ಯೆ:ಜಸಂಇ 120 ಎನ್ ಹೆಚ್ ಪಿ 2020**

**ಬೆಂಗಳೂರು, ದಿನಾಂಕ: 27-12-2021**

ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕಿನ ಬೇವಿನಹಳ್ಳಿ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಕುಡಿಯುವ ನೀರಿಗಾಗಿ 11 ಕೆರೆಗಳನ್ನು ತುಂಬಿಸುವ ಕಾಮಗಾರಿಯ (ರಂಗೇನಹಳ್ಳಿ ಕುಡಿಯುವ ನೀರಿನ ಯೋಜನೆ-ಹಂತ 2) ರೂ.22.50 ಕೋಟಿ ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ:ಆಇ 154 ಆಕೋ-1/2021(ಇ-ಆಫೀಸ್), ದಿನಾಂಕ:18-03-2021 ಹಾಗೂ ಯೋಜನಾ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ: ಪಿಡಿಎಸ್ 13 ಎಂಸಿಎಂ 2021 ಪಿಪಿಡಿ, ದಿನಾಂಕ:18-02-2021 ರಲ್ಲಿ ನೀಡಿರುವ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

27/12/2021

(ಮನೋಹರ ವೈ. ರೊಟ್ಟೆ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂ-2)
ಜಲ ಸಂಪನ್ಮೂಲ ಇಲಾಖೆ

ಇವರಿಗೆ :

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.

...3

45



2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ (ಗ್ರೇಡ್-2), ಜಲಸಂಪನ್ಮೂಲ ಇಲಾಖೆ.
3. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ (ಗ್ರೇಡ್-1), ಜಲಸಂಪನ್ಮೂಲ ಇಲಾಖೆ.
4. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ಗೊರೂರು.
6. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ.
7. ಸರ್ಕಾರದ ಜಂಟಿ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ:419/2021, ದಿನಾಂಕ:08-11-2021)
8. ನಿರ್ದೇಶಕರು, ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

+++++